ಬಿದ್ರೆ ನೀ ಇದ್ದೀಯಲ್ಲ, ಹೀರೋ' ಅಂದಳು, ತನ್ನ ಎಂದಿನ ತುಂಟತನದಲ್ಲೇ. ಪ್ರೀತಂ ಶೈಲತ್ತೆ ಕಡೆ ಪ್ರಶ್ನಾರ್ಥಕವಾಗಿ ನೋಡಿದ. ಶೈಲತ್ತೆ 'ನಮ್ಮ ಭೀಮಾ ನದಿಯಲ್ಲಿ ಈಸು ಕಲಿತಿದ್ದೆ, ಖರೆ. ಆದರೆ ಸಮುದ್ರದಲ್ಲಿ? ಯೇ ಅಪ್ಪ... ಸಾಧ್ಯಾನೇ ಇಲ್ಲ' ಅಂದಳು. ಪ್ರೀತಂ ಯಾಕೋ ಗಂಭೀರವಾಗಿರುವುದು ಅವರಿಬ್ಬರಲ್ಲಿ ಆತಂಕ ಮೂಡಿಸಿತು. ಸುಮಿ ಪ್ರೀತಂನ ತೋಳುಗಳಿಗೆ ಒತ್ತಿ ಕುಳಿತಳು. ಜೋರಾಗಿರುವ ಗಾಳಿ, ಬೋಟಿನಲ್ಲಿ ಹೆಚ್ಚಾಗಿರುವ ಭಾರದಿಂದ ಪ್ರೀತಂನಿಗೆ ಏನೋ ಅಪಾಯದ ಸುಳಿವು ಹತ್ತಿತ್ತು. ಬರುವಾಗ ಇದ್ದ ಆಕಾಶದ ನೀಲ ನಿಚ್ಚಳ ವರ್ಣ ಅನೂಹ್ಯ ಕಪ್ಪು ಬಣ್ಣಕ್ಕೆ ತಿರುಗಿತ್ತು. ಕಡಲು ಈಗ ರುದ್ರಗೊಂಡ ಕಾಳನಂತೆ ಕಾಣುತ್ತಿತ್ತು. ಕ್ಯಾಬಿನ್ನಿಗೆ ಹೋಗಿ ಡ್ರೈವರ್ ಜೊತೆ ಮಾತಾಡಬೇಕು ಅನಿಸಿದರೂ, ಸುಮಿಯಿಂದ ಬಿಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬರುವ ಹೋಗುವ ಇತರ ಬೋಟುಗಳ ಅಂತರವೂ ದೂರವಿತ್ತು. ಹೊರಗಿದ್ದ ನಾವಿಕನಿಗೆ ಅಲ್ಲಿಂದಲೇ ಕೂಗಿ ಕೊಂಕಣಿಯಲ್ಲಿ ಏನೋ ಹೇಳಿದ. ನಾವಿಕ ಮತ್ತು ಅವನ ಇಬ್ಬರು ಸಹಾಯಕರ ಮುಖದಲ್ಲೂ ದುಗುಡವಿತ್ತು. ಅದು ಪ್ರಯಾಣಿಕರಿಗೆ ತಿಳಿಯದಿದ್ದರೂ ಪ್ರೀತಂನಿಗೆ ಗೊತ್ತಾಗಿತ್ತು. ಪ್ರೀತಂ ಅಲ್ಲೇ ಸುತ್ತಿಟ್ಟ ಹಗ್ಗವನ್ನು ಬಿಡಿಸಿ ಜನರ ನಡುವೆ ಎಸೆದು, 'ಎಲ್ಲರೂ ಇದನ್ನು ಗಟ್ಟಿಯಾಗಿ ಹಿಡಿದು ಕೂತಿರಿ' ಎಂದ. ಆಗಲೂ ಯಾರಿಗೂ ಸನ್ನಿವೇಶದ ಗಂಭೀರತೆ ಅರಿವಾಗಲಿಲ್ಲ. ಶೈಲತ್ತೆ ಮತ್ತು ಸುಮಿಯರಿಗೆ 'ಯಾವುದೇ ಸಂದರ್ಭದಲ್ಲೂ ನನ್ನ ಕೈ ಬಿಡಬಾರದು' ಎಂದ. 'ಎಲ್ಲಾದರೂ ಉಂಟೆ! ನಾಳೆ ನೀನೇ ನನ್ನ ಕೈ ಹಿಡೀಬೇಕಲ್ಲ' ಅಂದಳು ಸುಮಿ. ಪ್ರೀತಂ ನಗಲಿಲ್ಲ. ಬೋಟಿನ ಹೊರಮೈಗೆ ಬಡಿದು ನೀರು ಚಿಮ್ಮಿಸುತ್ತಿದ್ದ ಅಲೆಗಳು ಈಗ ನೇರವಾಗಿ ಬೋಟಿನೊಳಗೇ ಅಪ್ಪಳಿಸುತ್ತಿದ್ದವು. ಜನರೆಲ್ಲ ನೀರಲ್ಲಿ ತೊಯ್ದು ತೊಪ್ಪೆಯಾದರು. ರೋಮಾಂಚನಗೊಳಿಸುತ್ತಿದ್ದ ಬೋಟಿನ ಹೊಯ್ದಾಟ ಈಗ ಭೀತಿಯ ಸ್ವರೂಪಕ್ಕೆ ತಿರುಗಿತ್ತು. ಆದರೂ ಸಮುದ್ರದಲ್ಲಿ ಎದ್ದ ತೂಫಾನ್ ಅಲೆಯೊಂದು ಇಡೀ ಬೋಟನ್ನೇ ಮಗುಚುತ್ತದೆ ಎಂದು ಪ್ರೀತಂನೂ ಎಣಿಸಿರಲಿಲ್ಲ!

ಅದೆಲ್ಲವೂ ಕೆಲವೇ ಕ್ಷಣಗಳಲ್ಲಿ ಆಗಿಹೋಗಿತ್ತು. ಪಶ್ಚಿಮದಿಂದ ಇಳಿಯುತ್ತಿದ್ದ ಸೂರ್ಯ ಕಣ್ಣು ಕುಕ್ಕುತ್ತಿದ್ದ. ಆದರೂ ತೆರೆಗಳು ಏಳುವ ತುದಿವರೆಗೂ ಪ್ರೀತಂ ಕಣ್ಣೋಡಿಸುತ್ತಿದ್ದ. ಒಂದನೇ ಎರಡನೇ ಮೂರನೇ... ಹೀಗೆ. ದೂರದಲ್ಲಿ ತೆರೆಗಳು ಗೆರೆಯಂತೆ ಕಾಣಿಸಿಕೊಂಡು, ಹತ್ತಿರವಾಗುತ್ತಿದ್ದಂತೆಯೇ ರಾಕ್ಷಸ ಸ್ವರೂಪದಲ್ಲಿ ತಾಳುವುದನ್ನು ಅವನು ಗಮನಿಸಿದ್ದ. ಸಮುದ್ರದಿಂದ ಏಳುವ ತೆರೆಗಳು ಸಮುದ್ರವನ್ನೇ ಬಗೆದು ಬಲಿತುಕೊಳ್ಳುವ ರೀತಿಗೆ ಎಂಥವರ ಎದೆಯೂ ನಡುಗಬೇಕು! ಪ್ರೀತಂ ಕಡಲಿಗೆ ಭಯಪಟ್ಟವನಲ್ಲ. ಆದರೆ ಆ ಬೋಟಿನಲ್ಲಿ ಅದೆಷ್ಟೋ ಜನರಿಗೆ ಈಸು ಗೊತ್ತಿಲ್ಲ ಎನ್ನುವುದು ಅವನಿಗೆ ಗೊತ್ತಿತ್ತು. ಗೊತ್ತಿದ್ದವರಿಗೂ ಸಮುದ್ರದ ಈಜು ಸುಲಭವಲ್ಲ ಎನ್ನುವುದೂ ತಿಳಿದಿತ್ತು. ಅನಾಹುತ ಸಂಭವಿಸಿದರೆ ಏನೇನು ಮಾಡಬಹುದು ಎಂಬುದರ ಬಗ್ಗೆ ಅವನ ಮೆದುಳು ಮಿಂಚಿನಂತೆ ಯೋಚಿಸುತ್ತಿತ್ತು. ಅಂಥ ಯೋಚನೆಯ ನಡುವೆಯೇ ಭಾರಿ ಗಾತ್ರದ ತೆರೆಯೊಂದು ತಲೆಯೆತ್ತಿ ನಿಂತಾಗ ಬೋಟ್ ಒಮ್ಮೆ ಮೇಲಕ್ಕೆ ನೆಗೆದು, ಕೆಳಗಿಳಿವಾಗ ಪಲ್ಟಿಯಾಗಿತ್ತು!

ಕೂತವರನ್ನು ಮೇಲೆತ್ತಿ ಎಸೆದ ರೀತಿಗೆ ಇವನನ್ನು ಗಟ್ಟಿಯಾಗಿ ಹಿಡಿದ ಸುಮಿಯ ಶೈಲತ್ತೆಯ ಕೈಗಳು ತಪ್ಪಿಹೋಗಿದ್ದವು. ಪ್ರೀತಂ ನೀರಿನಿಂದ ತಲೆ ಎತ್ತಿ ಸುಮಿ ಮತ್ತು ಶೈಲತ್ತೆಯನ್ನು ಹುಡುಕಾಡಿದ. ಸುಮೀ ಎಂದು ಕೂಗಿದ. ಸಹಾಯಕ್ಕಾಗಿ ಕೈ ಮೇಲೆತ್ತಿದ ಯಾರೋ ಇಬ್ಬರನ್ನು ಹಿಡಿದು ಮಗುಚಿದ ಬೋಟಿಗೆ ಮುಟ್ಟಿಸಿ ಅವರನ್ನು ಮೇಲೆ ಹತ್ತಿಸಿದ. ಸುಮಿ–ಶೈಲತ್ತೆ ಇಬ್ಬರೂ ಕಾಣದಿದ್ದಾಗ ಬೋಟಿನ ಕೆಳಗೆ ಸಿಕ್ಕಿರಬಹುದೇ ಎಂದು ಇನ್ನೊಮ್ಮೆ ಮುಳುಗಿ ಅಲ್ಲೆಲ್ಲ ಹುಡುಕಾಡಿದ. ಯಾರೂ ಕಾಣಲಿಲ್ಲ. ಇನ್ನೇನು ಮೇಲೆ ಬರಬೇಕು ಅನ್ನುವಷ್ಟರಲ್ಲಿ ಅಡ್ಡಕೋಲಿಗೆ ಅಂಗಿ ಸಿಲುಕಿ ಒದ್ದಾಡುತ್ತಿರುವ ಮಗುವೊಂದು ಕಂಡಿತು. ತಕ್ಷಣವೇ ಅತ್ತ ಈಸಿ ಆ ಮಗುವನ್ನು ಬಿಡಿಸಿ ಮೇಲೆತ್ತಿ ತಂದ. ಮೇಲೆ ನಾಲ್ಕಾರು ಜನ ಬೋಟ್ ಹಿಡಿದು ಬಚಾವಾಗಿದ್ದರು. ಅವರಲ್ಲೊಬ್ಬ 'ಮಗೂನ ನನ್ನ ಕೈಗೆ ಕೊಡಿ, ನಾನು ನೋಡ್ಕೋತೇನೆ ಅಂದ. ಅಷ್ಟರಲ್ಲಿ ಜನ ತೆರೆಯೊಡನೆ ತೇಲುತ್ತ ಮುಳುಗುತ್ತ ಬೋಟಿನಿಂದ ದೂರ ದೂರ ಸರಿದುಹೋಗುತ್ತಿದ್ದರು. ಕೆಲವರು ಮುಳುಗುವುದು ಏಳುವುದು ಮಾಡುತ್ತ ಸಹಾಯಕ್ಕಾಗಿ ಕೈಗಳನ್ನು ಎತ್ತುತ್ತಿದ್ದರು. ಅಲ್ಲೊಂದು ಕೈ ತನ್ನನ್ನು ಕರೆಯುತ್ತಿರುವಂತೆ ಕಂಡಿತು. ಬಾಣದಂತೆ ಈಸಿ ಅಲ್ಲಿಗೆ ತಲುಪಿದ. ಶೈಲತ್ತೆ! ಅವಳ ಕೈ ಹಿಡಿದು 'ಕಾಲು ಬಡಿಯುತ್ತಿರಿ' ಎಂದ. 'ಸುಮಿ ಕಾಣ್ತಿಲ್ಲ' ಎಂದ. 'ಸುಮೀ' ಎಂದು ಕೂಗಿದ. ಅವನ ಗಂಟಲು ಗದ್ಗದಿತವಾಗಿತ್ತು. ಶೈಲತ್ತೆಯೂ ಕೂಗಿದಳು.

'ಅದೋ ನೋಡು, ಅವಳೇ! ಪ್ರೀತಂ... ಹೋಗು ಬೇಗ ಹೋಗು, ನನ್ನ ಕೂಸನ್ನು ರಕ್ಷಿಸು... ಅವಳಿಗೇನಾದ್ರೂ ಆದ್ರೆ ನಾ ಬದುಕಿರಲಾರೆ. ಹೋಗು ಮಗನೇ' ಎಂದಳು. 'ನಾನು ಕೈಕಾಲು ಬಡೀತಿರ್ತೀನೆ. ಪ್ಲೀಸ್ ಮೊದ್ಲು ಅಲ್ಲಿ ಹೋಗು, ಕಂದಾ' ಎಂದು ಇವನ ಕೈ ಬಿಡಿಸಿಕೊಂಡು ಅವನನ್ನು ದೂಡಿದಳು. ಪ್ರೀತಂ ತನ್ನೆಲ್ಲ ಬಲವನ್ನು ಬಾಹುಗಳಲ್ಲಿಟ್ಟು ಅತ್ತ ಈಸಿದ. ನೋಡನೋಡುತ್ತ ಅವಳನ್ನು ತೆರೆಗಳು ಐವತ್ತು ಮೀಟರಿಗಿಂತ ಹೆಚ್ಚು ದೂರ ಒಯ್ದಿದ್ದವು. ಸುಮಿಯ ದುಪ್ಪಟ್ಟಾ ಮಾತ್ರ ನೀರಲ್ಲಿ ತೇಲುತಿತ್ತು. ಅದನ್ನೇ ಗುರುತಾಗಿಸಿಕೊಂಡು ಪ್ರೀತಂ ಮೀನಿನಂತೆ ಅತ್ತ ಈಸಿದ. ಮುಳುಗುತ್ತಿದ್ದವಳ ತಲೆಕೂದಲು ಹಿಡಿದು ಎತ್ತಿದ. ಸುಮಿ ಪ್ರಜ್ಞೆ ತಪ್ಪಿದ್ದಳು. ಆಕೆಯನ್ನು ಬೆನ್ನಿಗೆ ಹೇರಿಕೊಂಡು ಬೋಟ್ ಕಡೆಗೆ ಈಸಿದ. ಅಲೆಗಳ ಅಬ್ಬರದಲ್ಲೂ ಎಲ್ಲೆಲ್ಲೂ ಚೀರಾಟ ಕೇಳುತ್ತಿತ್ತು. ಮಗುಚಿದ ಬೋಟಿನ ತಳಭಾಗದಲ್ಲಿ ಸುಮಿಯನ್ನು ಅಡ್ಡ ಮಲಗಿಸಿದ. ಸುಮಿ ನೀರು ಕುಡಿದಿದ್ದಳು. ಹೊಟ್ಟೆ ಒತ್ತಿ ನೀರು ಹೊರಹಾಕಿದ. ನೀರು ಕಾರಿದ ಮೇಲೆ ಆಕೆಯ ಉಸಿರು ಸರಾಗವಾಯಿತು. ಎಚ್ಚರಗೊಂಡು ಅವನನ್ನು ಗಟ್ಟಿಯಾಗಿ ಅಪ್ಪಿಕೊಂಡಳು. ಪ್ರೀತಂ ಅವಸರದಲ್ಲಿದ್ದ. ಆಕೆಯನ್ನು ಸಂತೈಸಿ ಅವಳಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿದ. ಸುಮಿ 'ಭಯ ಆಗ್ತಿದೆ, ಬಿಟ್ಟು ಹೋಗ್ಬೇಡ ಪ್ರೀತ್... ಪ್ಲೀಸ್' ಎನ್ನುತ್ತಾ ಅವನ ಕೊರಳು, ಕೆನ್ನೆ, ಹಣೆಯನ್ನು ಚುಂಬಿಸಿದಳು. ಭಯದಿಂದ ಕಂಪಿಸುವ ಅವಳ ತುಟಿಗಳು ಪ್ರೀತಂನ ತುಟಿಗಳನ್ನು ಬಿಗಿದುಹಿಡಿದವು. ಪ್ರೀತಂ ಅವಳನ್ನು ಹೇಗೋ ಸಂಭಾಳಿಸಿ, 'ಇಲ್ಲೇ ಇರು, ಇವರೆಲ್ಲಾ ಇದ್ದಾರೆ... ಯಾರೂ ಅಲುಗಾಡಬೇಡಿ. ಹೀಗೇ ಕೂತಿರಿ... ಎಲ್ರೂ ಬೋಟ್ ಹತ್ತಬೇಡಿ, ಬೋಟ್ ಸೈಡು ಹಿಡಿದು, ಅಥ್ವಾ ಮೇಲೆ ಕೂತವ್ರ ಕೈ ಹಿಡಿದು ನೀರಲ್ಲೇ ಮೀಸಾಡ್ತಾ ಇರಿ...' ಎಂದು ಕೂಗುತ್ತ ಶೈಲತ್ತೆ ತೇಲುತ್ತಿದ್ದ ದಿಕ್ಕಿನತ್ತ ತೆರೆಗಳನ್ನು ದಾಟುತ್ತಾ ಕಣ್ಮರೆಯಾದ. ಅವನು ಅಂದಾಜಿಸಿದ ದೂರದ ಆ ತುದಿವರೆಗೆ ಈಸಿದರೂ ಶೈಲತ್ತೆ ಕಾಣಲಿಲ್ಲ. ಮುಂದೆ ಮುಂದೆ ಹೋದ. ಭಾರೀ ತೆರೆಗಳು ಬಂದಾಗ, ಅವುಗಳ ಎತ್ತರಕ್ಕೆ ನೆಗೆದು ಕಣ್ಣು ಹಾಯಿಸಿದ. ಶೈಲತ್ತೆ ಎಲ್ಲೂ ಕಾಣಲಿಲ್ಲ. ರಭಸದ ತೆರೆಗಳು ಅವಳನ್ನು ದೂರಕ್ಕೆ ಒಯ್ದುವೇ? ಅಥವಾ ಕಾಲುಗಳು ಸೋತು ಮುಳುಗಿದಳೇ? ರಕ್ಷಣೆಗೆ ಧಾವಿಸಿ ಬಂದಿರುವ ದೋಣಿಗಳು, ಬೋಟುಗಳು ಸಮುದ್ರದಲ್ಲಿ ರೌಂಡು ಹಾಕಲು ಶುರು ಮಾಡಿದ್ದವು. ಶೈಲತ್ತೆ ಯಾರ ಕಣ್ಣಿಗಾದರೂ ಬಿದ್ದು ಅವಳನ್ನು ರಕ್ಷಿಸುವಂತಾಗಲಿ. ದೇವರೇ... ಅವಳು ಅಲ್ಲಿವರೆಗೂ ಈಸುತ್ತಿರಲಿ! ಹತ್ತಿರದಲ್ಲಿ ಹಾದು ಹೋಗುತ್ತಿದ್ದ ಬೋಟಿನವರು ಪ್ರೀತಂನನ್ನು ಮೇಲೆತ್ತಿಕೊಂಡರು.

'ವಚ್ ವಚ್ ಥ್ಯಾ ಸೈಡ್ ವಚ್ರೆ' ಎಂದು ಕೊಂಕಣಿಯಲ್ಲಿ ಅವರಿಗೆ ಅವಸರ ಅವಸರದಲ್ಲಿ ಹೇಳಿದ. ಅವರು, ಅವನು ಹೇಳಿದ ದಿಕ್ಕಿಗೆ ಬೋಟು ಸುತ್ತಾಡಿತು. ಶೈಲತ್ತೆ ತೇಲುವ ಅಥವಾ ಮುಳುಗಿದ ಕುರುಹೇ ಕಾಣಲಿಲ್ಲ. ಬೋಟಿನೊಳಗೆ ನೀರು ಕುಡಿದು ಪ್ರಜ್ಞೆ ತಪ್ಪಿದ್ದ ಮೂವರನ್ನು ಸ್ಥಳೀಯ ಮೀನುಗಾರರು ಬದುಕಿಸುವ ಪ್ರಯತ್ನ ಮಾಡುತ್ತಿದ್ದರು. ಅವರ ಪ್ರಥಮ ಚಿಕಿತ್ಸೆಗೆ ನೀರು ಕುಡಿದವರು ಸ್ಪಂದಿಸುವಂತೆ ಕಾಣುತ್ತಿರಲಿಲ್ಲ. ಅಡ್ಡ ಮಲಗಿಸಿದ ಮೂವರಲ್ಲಿ ಒಬ್ಬಳನ್ನು ಪ್ರೀತಂ ಗುರುತು ಹಿಡಿದ. ಹೌದು, ಆಕೆ ಬಲೂನು ಕೈ ತಪ್ಪಿಸಿಕೊಂಡದ್ದಕ್ಕೆ ಮಗುವಿಗೆ ಬೆನ್ನಿಗೆ ಗುದ್ದಿದ್ದಳು... ಪ್ರೀತಂ ಬೋಟಿನವರೊಂದಿಗೆ ಮಾತಾಡಿ ಕೂಡಲೇ ಅವರನ್ನು ದಡಕ್ಕೆ ಒಯ್ಯುವುದು ಒಳ್ಳೆಯದು ಎಂದ. ತುರ್ತು ಚಿಕಿತ್ಸೆ ಸಿಕ್ಕರೆ ಜೀವ ಉಳಿದೀತು ಎಂಬುದು ಅವನ ಅವಸರಕ್ಕೆ ಕಾರಣವಾಗಿತ್ತು. ಪ್ರೀತಂ ಬೇರೊಂದು ಟ್ರಾಲರ್ ಹತ್ತಿದ್ದ. ಟ್ರಾಲರಿನ ಉಪ್ಪರಿಗೆ ಹತ್ತಿ ಸಮುದ್ರದಲ್ಲಿ ಕಣ್ಣಾಡಿಸಿದ. ಜಾತ್ರೆಯಲ್ಲಿ ಕೊಂಡ ಆಟಿಗೆ ಸಾಮಾನುಗಳು, ಕ್ಯಾಪುಗಳು, ವೆನಿಟಿ ಬ್ಯಾಗುಗಳು, ಮುಡಿದ ಹೂಗಳು, ದುಪಟ್ಟಾಗಳು ನೀರಮೇಲೆ ತೇಲುತ್ತಾ ದಾಟಿ ಹೋಗುತ್ತಿದ್ದವು. ಈಸಲು ಬಾರದವರನ್ನು ಕಡಲು ದಡದತ್ತ ತಳ್ಳಿತೋ ಅಥವಾ ತನ್ನೊಡಲಿಗೆ ಎಳೆದುಕೊಂಡಿತೋ ಅಂದಾಜಿಸುವುದು ಕಷ್ಟವಾಗಿತ್ತು. ಮೂರ್ನಾಲ್ಕು ದೋಣಿಗಳು